ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂ: 59/2010

(ಚಾ.ಸಾ.5 ಪ್ರಾ.ಸಾ.7)
ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು
ದಿನಾಂಕ:25.01.2021.

| | | |
|---|---|---|
| ಸಾಕ್ಷಿದಾರರ ಹೆಸರು | : | ಗಂಗಪ್ಪ |
| ತಂದೆಯ/ಗಂಡನ ಹೆಸರು | : | ಮುನಿವೆಂಕಟಪ್ಪ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ | : | ದ್ಯಾವರಹಳ್ಳಿ |

**ಮುಖ್ಯವಿಚಾರಣೆ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದ:** ನಾನು ದ್ಯಾವರಹಳ್ಳಿ ಗ್ರಾಮದ ವಾಸಿ. ಚಾಸಾ-1ರಿಂದ 4 ನನ್ನ ಬಾಮೈದುನರು. ಮೃತ ಗಾಯತ್ರಿ ನನ್ನ ತಂಗಿ. ಮೃತ ದೇವರಾಜು ಮತ್ತು ದೊಡ್ಡಚಿನ್ನಪ್ಪ ನನ್ನ ಸಂಬಂಧಿಕರು.

2. ಹನ್ನೊಂದು ವರ್ಷದ ಹಿಂದೆ ನಾನು, ಮುನಿಕೃಷ್ಣಪ್ಪ ಮತ್ತು ಮುನಿರಾಜು ದ್ಯಾವರಹಳ್ಳಿ ನನ್ನ ಬಾಮೈದುನನ ಕೋಳಿಫಾರಂ ಬಳಿ ಇದ್ದಾಗ ತಿಮ್ಮಪ್ಪರವರು ನಾರಾಯಣಸ್ವಾಮಿಗೆ ಇಟ್ಟಿಗೆ ಕೊಟ್ಟಿದ್ದ ವಿಚಾರಕ್ಕೆ ತನ್ನ ಬೈಕ್‌ನಲ್ಲಿ ನಾರಾಯಣಸ್ವಾಮಿಯ ಮನೆಯ ಬಳಿಗೆ ಬಂದಿದ್ದರು. ತಿಮ್ಮಪ್ಪ ಮುನಿರಾಜುವಿಗೆ ನಾರಾಯಣಸ್ವಾಮಿ ಎಂದು ಕೇಳಿದ್ದರು. ಮುನಿರಾಜು, ನಾರಾಯಣಸ್ವಾಮಿ ಎಲ್ಲೊ ಹೋಗಿದ್ದಾನೆ ಬರುತ್ತಾನೆ ಎಂದು ಹೇಳಿದ್ದರು.

3. 5-10 ನಿಮಿಷದ ನಂತರ ಪ್ರಾಸಾ-4 ನಾರಾಯಣಸ್ವಾಮಿ ವಾಪಸ್ಸು ಬಂದಿದ್ದರು. ತಿಮ್ಮಯ್ಯ ನಾರಾಯಣಸ್ವಾಮಿಗೆ ಇಟ್ಟಿಗೆ ಹಾಕಿದ ಕಾಸು ಕೊಡು ಎಂದು ಕೇಳಿದ್ದರು. ನಾರಾಯಣಸ್ವಾಮಿ, ಇವತ್ತು ಶಿವರಾತ್ರಿ ಹಬ್ಬ ಇದೆ ಕಾಸು ಇಲ್ಲ ನಾಳೆ ಕೊಡುತ್ತೇನೆ ಎಂದು ಹೇಳಿದ್ದರು. ನಾರಾಯಣಸ್ವಾಮಿ ಚೆಕ್ ಕೊಡುತ್ತೇನೆ ಎಂದು ತಿಮ್ಮಯ್ಯನಿಗೆ ಹೇಳಿದ್ದರು. ನೀನು ಚೆಕ್ ಕೊಡುವುದು ಬೇಡ ಎಂದು ತಿಮ್ಮಯ್ಯ ನಾರಾಯಣಸ್ವಾಮಿಗೆ ಹೇಳಿ ಬೈಕ್ ಮತ್ತು ಮೊಬೈಲ್ ಅನ್ನು ಅಲ್ಲಿಯೇ ಬಿಟ್ಟು ಹೋಗಿದ್ದರು. ನಿನ್ನನ್ನು ಏನು ಮಾಡುತ್ತೇನೆ ನೋಡಿಕೋ ಎಂದು ಹೇಳಿ ತಿಮ್ಮಯ್ಯ ಸ್ಥಳದಿಂದ ಹೋಗಿದ್ದರು.

4. ನಂತರ 9 ಗಂಟೆಗೆ ತಿಮ್ಮಯ್ಯ ಮತ್ತು ಇತರರು ದೊಣ್ಣೆಗಳು, ಲಾಂಗು, ಮಚ್ಚು ತೆಗೆದುಕೊಂಡು ಬಂದಿದ್ದರು. ಹತ್ತೊಂಬತ್ತು ಜನ ಬಂದಿದ್ದರು. ತಿಮ್ಮಯ್ಯ ಮತ್ತು ಅವರ ಜೊತೆ ಬಂದಿದ್ದವರಿಲ್ಲಿ ಬಂದಿದ್ದವರಲ್ಲಿ ಒಬ್ಬನು ನಾರಾಯಣಸ್ವಾಮಿಗೆ ಏ ವಡ್ಡನನ್ನಮಗನೇ ಏನೋ ಕಾಸು ಕೊಡುವುದಿಲ್ಲಾವಾ ಎಂದು ಆತನ ಕೆನ್ನೆಗೆ ಹೊಡೆದಿದ್ದನು. ಚಿನ್ನಪ್ಪ, ದೇವರಾಜು ಮತ್ತು ನಾನು ನಾರಾಯಣಸ್ವಾಮಿರವರ ಬಳಿಗೆ ಹೋಗಿದ್ದೆವು. ನಾರಾಯಣಸ್ವಾಮಿಯನ್ನು ಒಂದು ರೂಮ್‌ನಲ್ಲಿ ಹಾಕಿ ಬಾಗಿಲು ಹಾಕಿದ್ದೆವು.

5. ತಿಮ್ಮಯ್ಯ ನಾರಾಯಣಸ್ವಾಮಿಯನ್ನು ಎಳೆದುಕೊಳ್ಳಿರೋ ಅವನನ್ನು ಹೊಡೆಯಿರೋ ಎಂದು ಓಡಿ ಬಂದಿದ್ದರು. ನನ್ನ ತಂಗಿ ಗಾಯಿತ್ರಮ್ಮ ಹೊಡೆಯಬೇಡಿ ಎಂದು ಹೇಳುತ್ತಾ ಸ್ಥಳಕ್ಕೆ ಬಂದಿದ್ದರು. ತಿಮ್ಮಯ್ಯ ಗಾಯಿತ್ರಮ್ಮನ ಹೊಟ್ಟೆಗೆ ಲಾಂಗ್‌ನಿಂದ ತಿವಿದಿದ್ದನು. 5-6 ಜನ ದೊಣ್ಣೆಯಿಂದ ಗಾಯಿತ್ರಮ್ಮನ ಕೈಗಳಿಗೆ ಹೊಡೆದಿದ್ದರು. ಹೊಡೆದ ವ್ಯಕ್ತಿಗಳ ಹೆಸರು ಘಟನೆ ನಡೆದು 11 ವರ್ಷ ಆಗಿರುವುದರಿಂದ ಈಗ ನೆನಪಾಗುವುದಿಲ್ಲ.

6. ನನ್ನ ಮಾವ ದೊಡ್ಡಚಿನ್ನಪ್ಪ ಸ್ಥಳಕ್ಕೆ ಓಡಿಬಂದಿದ್ದರು. (6ನೇ ಆರೋಪಿ) ಶಾಂತಕುಮಾರ ದೊಡ್ಡಚಿನ್ನಪ್ಪನ ಹೊಟ್ಟೆಗೆ ಲಾಂಗ್‌ನಿಂದ ಚುಚ್ಚಿದ್ದರು. ಶಾಂತಕುಮಾರನ ತಮ್ಮ ವೆಂಕಟಪ್ಪ, ಚಿನ್ನಪ್ಪನ ಹೊಟ್ಟೆಗೆ ಲಾಂಗಿನಿಂದ ಚುಚ್ಚಿದ್ದರು. ಮುನಿಕೃಷ್ಣಪ್ಪ ಮತ್ತು ಮುನಿರಾಜು ಸ್ಥಳಕ್ಕೆ ಬಂದಿದ್ದರು. (19ನೇ ಆರೋಪಿ) ಮುನಿಶಾಮಪ್ಪನ ಮಗ ಮುನಿರಾಜು ಮುನಿಕೃಷ್ಣಪ್ಪನಿಗೆ ಪಕ್ಕೆಗೆ ಚುಚ್ಚಿದ್ದರು.

7. (5ನೇ ಆರೋಪಿ) ಮುನಿರಾಜು, (ಚಾಸಾ-2) ಮುನಿರಾಜಪ್ಪನಿಗೆ ಚೂರಿಯಲ್ಲಿ ಆತನ ಪಕ್ಕೆಗೆ ಚುಚ್ಚಿದ್ದನು. (ಚಾಸಾ-3) ಮಂಜುನಾಥ ತೋಟದಿಂದ ಬಂದಿದ್ದರು. ಆತ ಒಂದು ಕಲ್ಲನ್ನು ಎಸೆದಿದ್ದರು ಆಗ ಒಬ್ಬ ಆರೋಪಿ ಕೆಳಗೆ ಬಿದ್ದಿದ್ದರು ಕೆಳಗೆ ಬಿದ್ದಿದ್ದ ಆರೋಪಿಯ ಹೆಸರು ಈಗ ನನಗೆ ಹೇಳಲು ಸಾಧ್ಯವಿಲ್ಲ. ಆರೋಪಿಗಳಲ್ಲಿ ಒಬ್ಬರು ಮಂಜುನಾಥನಿಗೆ ಚಾಕುವಿನಿಂದ ಚುಚ್ಚಿದ್ದರು. ಆರೋಪಿಯ ಯಾರು ಎಂದು ಈಗ ನನಗೆ ಹೇಳಲು ಸಾಧ್ಯವಿಲ್ಲ. ಮಂಜುನಾಥನ ಎದೆಗೆ ಏಟಾಗಿತ್ತು.

8. ಎಲ್ಲಾ ಆರೋಪಿಗಳು ಓಡಿ ಹೋಗಿದ್ದರು. ನಾರಾಯಣಸ್ವಾಮಿ, ದೇವರಾಜು, ಮಂಜುನಾಥ, ಮುನಿರಾಜಪ್ಪ, ಎಲ್ಲಾ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಾನು ಎರಡು ದಿನಗಳ ನಂತರ ದೊಡ್ಡಬಳ್ಳಾಪುರದ ಪೋಲಿಸ್ ಠಾಣೆಗೆ ಹೋಗಿದ್ದೆ. ಆಮೇಲೆ ಒಂದೂವರೆ ತಿಂಗಳ ನಂತರ ದೊಡ್ಡಬಳ್ಳಾಪುರ ಠಾಣೆಗೆ ಹೋಗಿದ್ದೆ. ಘಟನೆ ನಡೆದ ದಿನ ಏನು ನಡೆದಿತ್ತು ಎಂದು ಪೋಲಿಸರಿಗೆ ಹೇಳಿದ್ದೆ. ದೇವರಾಜು, ಗಾಯತ್ರಮ್ಮ ಮತ್ತು ದೊಡ್ಡಚಿನ್ನಪ್ಪ ಸತ್ತು ಹೋಗಿದ್ದರು.

9. ಘಟನೆ ನಡೆದು ಹನ್ನೊಂದು ವರ್ಷಗಳಾಗಿರುವುದರಿಂದ ಲಾಂಗ್, ದೊಣ್ಣೆ ಮತ್ತು ಚಾಕುವನ್ನು ಈಗ ನೋಡಿದರೆ ನನಗೆ ಗುರುತಿಸಲು ಸಾಧ್ಯವಿಲ್ಲ. ನಾನು ಆ ದಿನ ಗಲಾಟೆ ಮಾಡಿದ ಎಲ್ಲಾ ಆರೋಪಿಗಳನ್ನು ನೋಡಿದರೆ ಗುರುತಿಸಬಲ್ಲೆ. ಎಲ್ಲಾ ಆರೋಪಿಗಳ ಪರ ವಕೀಲರು ಹಾಜರಿದ್ದು ಆರೋಪಿಗಳನ್ನು ಗುರುತಿಸುವ ಬಗ್ಗೆ ತಮ್ಮ ತಕರಾರು ಇಲ್ಲ ಎಂದು ನುಡಿದಿದ್ದು ಎಲ್ಲಾ ಆರೋಪಿಗಳ ಗೈರು ಹಾಜರಾತಿಗೆ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ.

**10. ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ** ಪಾಟೀ ಸವಾಲು ಮಾಡಲು ಕಾಲಾವಕೋಶ ಕೋರಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಪ್ರಶೀಲಾ ಕುಮಾರಿ ಜಿ ಎಸ್)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ , ಬೆಂಗಳೂರು.